**ದಿನಾಂಕಃ 20-02-2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀಮತಿ.ಪಿ.ಬಿ.ಎಸ್. ವಕೀಲ ರಿಂದಃ**

ನಾನು ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ಸರಿ ಇರುತ್ತದೆ ಎಂದು ಒಪ್ಪಿ- ಸಹಿ ಮಾಡಿರುತ್ತೇನೆ.

ಸಾಕ್ಷಿಯು MVC.1462/2024 ರ ಗಾಯಾಳು ಆದ ಶ್ರೀಮತಿ. ಅನಿತ ರವರವರಿಗೆ ಚಿಕಿತ್ಸೆ ನೀಡಿರುತ್ತೇನೆ. ಸದರಿ ಅನಿತ ರವರಿಗೆ ಸಂಬಂಧಿಸಿದ Case sheet, MRI Scanning, OPD Slip and X-Ray report ಗಳನ್ನು ಹಾಜರುಪಡಿಸಿರುತ್ತಾರೆ. ಅವುಗಳನ್ನು **ನಿಪಿ.47** ರಿಂದ **ನಿಪಿ.50** ಎಂದು ಗುರುತಿಸಲಾಯಿತು.

ಗಾಯಾಳು ಆದ ಅನಿತ ರವರಿಗೆ ದೇಹದ ನ್ಯೂನ್ಯತೆ 15 % ಇರುತ್ತದೆ.

ಸಾಕ್ಷಿಯು MVC.1465/2024 ರ ಗಾಯಾಳು ಆದ ಶ್ರೀದೇವಿ ಕೆ.ಎಂ. ರವರವರಿಗೆ ಚಿಕಿತ್ಸೆ ನೀಡಿರುತ್ತೇನೆ. ಸದರಿ ಶ್ರೀ ದೇವಿ ಕೆ.ಎಂ. ರವರಿಗೆ ಸಂಬಂಧಿಸಿದ Case sheet, CT Scanning ಜೊತೆಗೆ Recent X-Ray report ಮತ್ತು OPD Slip ಗಳನ್ನು ಹಾಜರುಪಡಿಸಿರುತ್ತಾರೆ. ಅವುಗಳನ್ನು **ನಿಪಿ.51** ರಿಂದ **ನಿಪಿ.53** ಎಂದು ಗುರುತಿಸಲಾಯಿತು.

ಗಾಯಾಳು ಆದ ಶ್ರೀ ದೇವಿ ಕೆ.ಎಂ. ರವರಿಗೆ ದೇಹದ ನ್ಯೂನ್ಯತೆ 13% ಇರುತ್ತದೆ.

ಸಾಕ್ಷಿಯು MVC.1466/2024 ರ ಗಾಯಾಳು ಆದ ನಿರ್ಮಲ ಕೆ.ಪಿ. ರವರವರಿಗೆ ಚಿಕಿತ್ಸೆ ನೀಡಿರುತ್ತೇನೆ. ಸದರಿ ನಿರ್ಮಲ ಕೆ.ಪಿ. ರವರಿಗೆ ಸಂಬಂಧಿಸಿದ Case sheet, CT Scanning, OPD Slip ಮತ್ತು Recent X-Ray report ಗಳನ್ನು ಹಾಜರುಪಡಿಸಿರುತ್ತಾರೆ. ಅವುಗಳನ್ನು **ನಿಪಿ.54** ರಿಂದ **ನಿಪಿ.57** ಎಂದು ಗುರುತಿಸಲಾಯಿತು.

ಗಾಯಾಳು ಆದ ನಿರ್ಮಲ ಕೆ.ಪಿ. ರವರಿಗೆ ದೇಹದ ನ್ಯೂನ್ಯತೆ 10% ಇರುತ್ತದೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ.ಜೆ.ಬಿ. ವಕೀಲರಿಂದಃ**

ಅಪಘಾತ ನಡೆದ ದಿನವೇ ಮೂರು ಜನ ಗಾಯಾಳುಗಳು ಚಿಕಿತ್ಸೆಗೆ ಬಂದಿರುತ್ತಾರೆ. ಮೂರು ಜನ ಗಾಯಾಳುಗಳು ಆಸ್ಪತ್ರೆಗೆ ಬಂದಾಗ ಪ್ರಜ್ಞೆ ಇರುತ್ತದೆ. ನಾನು ಮೂರು ಜನರಿಗೆ ಪ್ರತ್ಯೇಕವಾದ ಚಿಕಿತ್ಸೆ ನೀಡಿರುತ್ತೇನೆ. ನಾನು ಅಪಘಾತದ ವಿಚಾರವಾಗಿ ಮೂರು ಗಾಯಾಳುಗಳಿಗೆ MLC ಮಾಡಿರುವುದಿಲ್ಲ ಕಾರಣ ಏನು ಎಂದರೆ ಸರ್ಕಾರಿ ಆಸ್ಪತ್ರೆಯವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮೂರು ಜನ ಗಾಯಾಳುಗಳಿಗೆ ಶಿರಾ ಸರ್ಕಾರಿ ಆಸ್ಪತ್ರೆಯಿಂದ ಗಾಯದ ಪ್ರಮಾಣ ಪತ್ರ ಕೊಟ್ಟಿರುತ್ತಾರೆ. ನಿಪಿ.20 ರ ಗಾಯಾದ ಪ್ರಮಾಣ ಪತ್ರದಂತೆ ಗಾಯಾಳುವಿಗೆ ಭುಜದ ಮೇಲೆ ಊತ ಗಾಯ ಇದೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿಯು ನನ್ನ ಬಳಿ ಬಂದಾಗ Fracture ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.21 ರ ಬಿಡುಗಡೆ ಪ್ರಮಾಣ ಪತ್ರ ನಾನೆ ಬರೆದಿರುತ್ತೇನೆ. ನಾನು ನಿಪಿ.21 ರ ಬಿಡುಗಡೆ ಪ್ರಮಾಣ ಪತ್ರದಲ್ಲಿ 3 ಜನ ಗಾಯಾಳುವಿಗೂ ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ. ಆದರೆ Conservative treatment ಮಾತ್ರ ಮಾಡಿರುತ್ತೇನೆ. ನಾನು 3 ಜನ ಗಾಯಾಳುಗಳಿಗೆ ಶಸ್ತ್ರ ಚಿಕಿತ್ಸೆ ಮಾಡದೇ ನ್ಯೂನ್ಯತೆ ಹೇಳುತ್ತೇನೆ ಎಂದರೆ ಸರಿಯಲ್ಲ. ನಾನು 3 ಜನ ಗಾಯಾಳುಗಳಿಗೆ ನ್ಯೂನ್ಯತೆಗಳನ್ನು National Disability Guidelines ರಂತೆ ಕೊಟ್ಟಿರುತ್ತೇನೆ. ನಾನು ಹೇಳಿದ 3 ಜನ ಗಾಯಾಳುವಿಗೆ ನ್ಯೂನ್ಯತೆಗಳು ಶಸ್ತ್ರ ಚಿಕಿತ್ಸೆ ಮಾಡದೆ ಇರುವುದರಿಂದ ಬರುವುದಿಲ್ಲ ಎಂದರೆ ಸರಿಯಲ್ಲ. 3 ಜನ ಗಾಯಾಳುಗಳು ವ್ಯವಸಾಯ ಮತ್ತು ಟೈಲರಿಂಗ್ ಕೆಲಸ ಮಾಡುತ್ತಾರೆ. 3 ಜನ ಗಾಯಾಳುಗಳನ್ನು ಇತ್ತೀಚಿಗೆ ಪರೀಕ್ಷಿಸಿದಾಗ Spine ಮತ್ತು ಭುಜದ ಸಮಸ್ಯೆ ಇರುತ್ತದೆ. ನಾನು 3 ಗಾಯಾಳುಗಳಿಗೂ ಶಸ್ತ್ರ ಚಿಕಿತ್ಸೆ ಮಾಡದೆ ಅವರಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಪರ ಹಿ.ಸಿ.ಜೆ. ಮತ್ತು  ಜೆ.ಎಮ್.ಎಫ್.ಸಿ.
ಶಿರಾ.